ಪ್ರಜಾವಾಣಿ

Thursday, September 16th, 2010

## ಸಂಕ್ಷಿಪ್ತ ಸುದ್ದಿ

# ದೃಢೀಕರಣ

ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಮಂಡಳಿಯು ನಗರದ ಜೈನ್ ಅಂತರ ರಾಷ್ಟ್ರೀಯ ವಸತಿ ಶಾಲೆಯನ್ನು "ಉತ್ಕೃಷ್ಟ ಶಾಲಾ ಆಡಳಿತ" ಎಂದು ದೃಢೀಕರಿಸಿದೆ. ಜೈನ್ ಶಾಲೆಯು ಕರ್ನಾಟಕದಲ್ಲಿ ಈ ದೃಢೀಕರಣವನ್ನು ಪಡೆದ ಪ್ರಥಮ ವಿದ್ಯಾಸಂಸ್ಥೆಯಾಗಿದೆ.

ರಾಷ್ಟ್ರೀಯ ಗುಣಮಟ್ಟ ಮಂಡಳಿಯ ಮಹಾ ಕಾರ್ಯದರ್ಶಿ ಡಾ. ಗಿರಿಧರ್ ಜೆ ಗ್ಯಾನಿ ಜೈನ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಆರ್ ಚೆನ್‌ರಾಜ್ ಜೈನ್ ಅವರಿಗೆ ದೃಢೀಕರಣ ಪತ್ರವನ್ನು ಇದೇ ತಿಂಗಳ 16 ರಂದು ನೀಡಲಿದ್ದಾರೆ. ಜೈನ್ ವಸತಿ ಶಾಲೆ ರಾಷ್ಟ್ರದಲ್ಲಿ ಈ ದೃಢೀಕರಣ ಪಡೆದಿರುವ ಹತ್ತನೇ ವಿದ್ಯಾಸಂಸ್ಥೆಯಾಗಿದೆ.